ರುಚಿಕರವಾದ ಉಪಹಾರ
ಸಿಹಿ–ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ ಫೋ : 232878

www.kundaprabha.com    e-mail : kundaprabha@gmail.com

# ಕುಂದಪ್ರಭ

ಸ್ಥಾಪನೆ : 1948
6 ದಶಕಗಳ
ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್‌ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್: 230242

*ಸಂಪುಟ :25 *ಸಂಚಿಕೆ :50 * KA/SK/Udp/1263/2012-14 * R.NO. 50495/91 * ತಾರೀಕು 06–01–2015 * ರೂ 5/– * ವಾರ್ಷಿಕ ಚಂದಾ : 270/– ಅಂಚೆಯಲ್ಲಿ : 300/

### ತಲ್ಲೂರು ಶ್ರೀ ರಾಜ್ ಕೊಠಾರಿ ನಿರ್ಮಾಣದ

# ಕುಂದಾಪ್ರ ಕನ್ನಡದ "ಹಜ್" ಗೆ ರಾಜ್ಯ ಶ್ರೇಷ್ಠ ಚಲನಚಿತ್ರ ಪ್ರಶಸ್ತಿ



ಬೆಂಗಳೂರಿನಲ್ಲಿ ನಡೆದ ಅಂತರಾಷ್ಟ್ರೀಯ ಚಲನಚಿತ್ರ ಉತ್ಸವದಲ್ಲಿ ಅತ್ಯುತ್ತಮ ಚಿತ್ರ ಪ್ರಶಸ್ತಿಯನ್ನು ನಿರ್ಮಾಪಕ ಶ್ರೀ ರಾಜ್ ಕೊಠಾರಿ ತಲ್ಲೂರು ಇವರು ಕರ್ನಾಟಕ ರಾಜ್ಯಪಾಲ ವಜೂಭಾಯಿವಾಲರಿಂದ ಸ್ವೀಕರಿಸುತ್ತಿರುವುದು. ಚಿತ್ರದಲ್ಲಿ ಪುನೀತ್ ರಾಜ್‌ಕುಮಾರ್, ಸಚಿವ ರೋಶನ್ ಬೇಗ್ ಮುಂತಾದವರಿದ್ದಾರೆ.



ಶ್ರೀ ರಾಜ್‌ಕೊಠಾರಿ ಹಜ್ ಚಿತ್ರದಲ್ಲಿ ಅಭಿನಯಿಸುತ್ತಿರುವುದು.

**ರಾಜ್ಯ ಚಲನಚಿತ್ರ ಪ್ರಶಸ್ತಿಯಲ್ಲಿ ಈ ಭಾರಿ ಕುಂದಾಪುರಕ್ಕೆ ಕೀರ್ತಿ ಲಭಿಸಿದೆ. ಕುಂದಾಪುರದ ನಿರ್ಮಾಪಕರೊಬ್ಬರು ಕುಂದಾಪ್ರ ಕನ್ನಡದಲ್ಲಿ ನಿರ್ಮಾಣ ಮಾಡಿದ ಪ್ರಥಮ ಚಿತ್ರಕ್ಕೆ ರಾಜ್ಯ ಹಾಗೂ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಮನ್ನಣೆ ದೊರಕಿರುವುದು ಹೆಮ್ಮೆಯ ವಿಷಯ.**

ಕುಂದಾಪುರ ತಾಲ್ಲೂಕಿನ ತಲ್ಲೂರಿನ ಶ್ರೀ ರಾಜ್ ಕೊಠಾರಿಯವರು ಸೂರ್ಯ ಎಂಟರ್‌ಟೈನರ್ಸ್ ಸಂಸ್ಥೆಯ ಹೆಸರಲ್ಲಿ ನಿರ್ಮಾಣ ಮಾಡಿದ ಕುಂದಾಪ್ರ ಕನ್ನಡದ "ಹಜ್" ಚಲನಚಿತ್ರಕ್ಕೆ 2013 ನೇ ಸಾಲಿನ "ಅತ್ಯುತ್ತಮ ಸಿನಿಮಾ" ರಾಜ್ಯ ಪ್ರಶಸ್ತಿ ಬಂದಿದೆ. ಇತ್ತೀಚೆಗೆ ಬೆಂಗಳೂರು ಹಾಗೂ ಕಲ್ಕತ್ತಾದಲ್ಲಿ ನಡೆದ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ "ಹಜ್" ಅತ್ಯುತ್ತಮ ಪ್ರಶಸ್ತಿ ಪಡೆದಿತ್ತು.

ಶ್ರೀ ರಾಜ್ ಕೊಠಾರಿಯವರ ಸ್ನೇಹಿತರೂ ಆದ ನಿಖಿಲ್ ಮಂಜು ಈ ಚಿತ್ರ ನಿರ್ದೇಶಿಸಿ ಮುಖ್ಯ ಪಾತ್ರದಲ್ಲಿ ನಟಿಸಿದ್ದರು. ಅತ್ಯುತ್ತಮ ನಟ ಪ್ರಶಸ್ತಿಗೆ ನಿಖಿಲ್ ಮಂಜು ಆಯ್ಕೆಗೊಂಡಿದ್ದಾರೆ.

ಕುಂದಾಪುರ ಕನ್ನಡ ಭಾಷೆಯಲ್ಲೇ ಒಂದು ಚಲನಚಿತ್ರ ನಿರ್ಮಾಣ ಮಾಡಬೇಕೆಂಬ ಶ್ರೀ ರಾಜ್ ಕೊಠಾರಿಯವರ ಆಸೆ ಈಡೇರಿದ್ದಲ್ಲದೇ



ಶ್ರೀ ರಾಜ್ ಕೊಠಾರಿ, ತಲ್ಲೂರು

ಅತ್ಯುತ್ತಮ ಚಿತ್ರ ಪ್ರಶಸ್ತಿಯೂ ಪಡೆದಿರುವುದು ದೊಡ್ಡ ಸಾಧನೆಯಾಗಿದೆ. ಶ್ರೀ ರಾಜ್ ಕೊಠಾರಿಯವರೂ, ಸ್ಥಳೀಯ ಹಲವು ಕಲಾವಿದರೂ ಅಭಿನಯಿಸಿದ್ದಾರೆ.

ಈ ಹಿಂದೆ ಉಪೇಂದ್ರ ಅವರೊಂದಿಗಿದ್ದು, ಅವರ "ಎ" "ಉಪೇಂದ್ರ" "ಓಂ" ಮುಂತಾದ ಯಶಸ್ವಿ ಚಿತ್ರಗಳಲ್ಲಿ ಸಹಾಯಕರಾಗಿದ್ದ ಶ್ರೀ ರಾಜ್ ಕೊಠಾರಿಯವರು ದೂರದರ್ಶನದಲ್ಲಿ ಧಾರವಾಹಿ ನಿರ್ದೇಶನದ ಮೂಲಕವೂ ಕೀರ್ತಿಗಳಿಸಿದ್ದರು.

"ಹಜ್" ಒಂದು ಸಾಂಸಾರಿಕ, ಭಾವನಾತ್ಮಕ ಚಿತ್ರವಾಗಿದ್ದು, ಮುಸ್ಲಿಂ ಕುಟುಂಬದ ಸಹಜ ಕಥೆಯನ್ನಾಧರಿಸಿ, ಚಿತ್ರೀಕರಣಗೊಂಡಿದೆ. ಬಹುತೇಕ ಚಿತ್ರೀಕರಣ ಕುಂದಾಪುರದಲ್ಲೇ ನಡೆದಿತ್ತು.

ಹಜ್ ಚಿತ್ರ ಅತ್ಯುತ್ತಮ ಕಥೆ ಬರೆದ ಶ್ರೀ ಲಲಿತೆಗೂ ಬಹುಮಾನ ಪಡೆದಿದೆ.

ಕರ್ನಾಟಕದ ವಿವಿಧ ಸಂಘ ಸಂಸ್ಥೆಗಳು ವಿದೇಶದಲ್ಲಿ ಹಾಗೂ ಬೇರೆ ರಾಜ್ಯಗಳಲ್ಲಿದ್ದು ಈ ಚಲನಚಿತ್ರ ಪ್ರದರ್ಶನಕ್ಕೆ ಸಂಪರ್ಕಿಸಬಹುದಾಗಿದೆ.

## ಚಿತ್ರದಲ್ಲಿ ಅಭಿನಯಿಸಿದ ಸ್ಥಳೀಯ ಕಲಾವಿದರು

ಈ ಚಿತ್ರದ ಬಹುತೇಕ ಚಿತ್ರೀಕರಣ ನದಿ ಹಾಗೂ ದೋಣಿಯಲ್ಲಿ ನಡೆದಿದ್ದು ಕುಂದಾಪುರ ತಾಲ್ಲೂಕಿನ ಮರವಂತೆ ಪರಿಸರವನ್ನು ಬಳಸಿಕೊಂಡಿರುವುದು ವಿಶೇಷ. ಕುಂದಾಪುರ ತಾಲ್ಲೂಕಿನ ಪಂಚಗಂಗಾವಳಿ ನದಿಯ ಸುಂದರ ಪ್ರಾಕೃತಿಕ ಸೌಂದರ್ಯವನ್ನು ಚಿತ್ರ ಅತ್ಯುತ್ತಮವಾಗಿ ಸೆರೆಹಿಡಿದಿದೆ.

ಚಿತ್ರದಲ್ಲಿ ಸ್ಥಳೀಯ ಕಲಾವಿದರು ಪ್ರಮುಖ ಪಾತ್ರದಲ್ಲಿ ಅಭಿನಯಿಸಿರುವುದು ವಿಶೇಷ. ನಾಯಕಿ ನಟಿ ಮಾನಸ ಜೋಷಿ ತಂದೆಯ ಪಾತ್ರದಲ್ಲಿ ಶ್ರೀ ರಾಜ್ ಕೊಠಾರಿ ಅಭಿನಯಿಸಿದ್ದಾರೆ. ಲಾವಣ್ಯ ಬೈಂದೂರಿನ ಗಿರೀಶ್ ಬೈಂದೂರು, ಶಿಕ್ಷಕ ಯೋಗೀಶ್, ಜಿ.ಪ.ಸದಸ್ಯ ಅನಂತ ಮೂವಾಡಿ, ಸಾಹಿತಿ ಯಾಕೂಬ್ ಖಾದರ್ ಗುಲ್ವಾಡಿ, ಉಸ್ಮಾನ್ ಗುಲ್ವಾಡಿ ಮರವಂತೆಯ, ಗಿಲ್ಬರ್ಟ್ ಡಿ'ಸೋಜ, ಅವರ ಪುತ್ರ ಪ್ರೀತಮ್ ಡಿ'ಸೋಜ, ನೆರಮನೆಯ ರಿಚ್ಚಿ ಚಿತ್ರದಲ್ಲಿ ಅಭಿನಯಿಸಿದ ಸ್ಥಳೀಯ ಕಲಾವಿದರಲ್ಲಿ ಪ್ರಮುಖರು.

ಶ್ರೀ ರಾಜ್ ಕೊಠಾರಿ 09448008321

# ಕೋ.ಮ.ಕಾರಂತ ಪ್ರಶಸ್ತಿ ಪುರಸ್ಕೃತ ಸಂಶೋಧಕ ಡಾ|ಕೆ.ಜಿ.ವಸಂತ ಮಾಧವ ಕೊಡಂಚ



**ಕುಂದಪ್ರಭ ಆಶ್ರಯದಲ್ಲಿ ಕೋ.ಮ.ಕಾರಂತ ಪ್ರಶಸ್ತಿ ಪ್ರದಾನ ಸಮಾರಂಭ ತಾ.18 ರಂದು ಆದಿತ್ಯವಾರ ನಡೆಯಲಿದ್ದು ಪ್ರಶಸ್ತಿ ಪುರಸ್ಕೃತರಾಗಲಿರುವ ಖ್ಯಾತ ಇತಿಹಾಸ ಸಂಶೋಧಕ ಡಾ.ಕೆ.ಜಿ.ವಸಂತ ಮಾಧವ ಅವರ ಸಂಕ್ಷಿಪ್ತ ಪರಿಚಯ ಇಲ್ಲಿದೆ.**

ಇತಿಹಾಸ ಸಂಶೋಧನೆಯಲ್ಲಿ ಸಾರ್ಥಕ ಸಾಧನೆಗೈದ ಕೆಲವೇ ಸಾಧಕರಲ್ಲಿ ಹಿರಿಯವರಾದ ಡಾ|ವಸಂತ ಮಾಧವ ಕೊಡಂಚ ಅವರು ಕುಂದಾಪುರ ತಾಲೂಕಿನ ಗುಜ್ಜಾಡಿಯವರು. ಗುಜ್ಜಾಡಿಯಲ್ಲಿ 9–4–1937 ರಲ್ಲಿ ಹುಟ್ಟಿದ ವಸಂತ ಮಾಧವ ಅವರು ತಮ್ಮ ಪ್ರಾಥಮಿಕ, ಪ್ರೌಢಶಾಲಾ ಶಿಕ್ಷಣವನ್ನು ಗಂಗೊಳ್ಳಿ ಸರಸ್ವತಿ ವಿದ್ಯಾಲಯದಲ್ಲಿ ನಡೆಸಿದವರು.

ಮೈಸೂರು ವಿಶ್ವವಿದ್ಯಾಲಯದಲ್ಲಿ ಬಿ.ಎ. ಪದವಿಯನ್ನು 1959 ರಲ್ಲಿ ಮುಗಿಸಿ 1961 ರಲ್ಲಿ ಕರ್ನಾಟಕ ವಿ.ವಿ.ಯಲ್ಲಿ ಎಂ.ಎ. ಪದವಿ ಪಡೆದರು.

ಮೂಲ್ಕಿಯ ವಿಜಯಾ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ರೀಡರ್ ಆಗಿ, ಪ್ರೊಫೆಸರ್ ಆಗಿ 32 ವರ್ಷಗಳ ಕಾಲ ಸೇವೆ ಸಲ್ಲಿಸಿದ ಡಾ| ಕೆ.ಜಿ.ವಸಂತ ಮಾಧವರು ಈ ಅವಧಿಯಲ್ಲಿ ಕರಾವಳಿಯ ಇತಿಹಾಸದ ಬಗ್ಗೆ ಅಪಾರ ಸೇವೆ ಸಂಶೋಧನೆಗಳನ್ನು ನಡೆಸಿ ಪ್ರಬುದ್ಧ ಪ್ರಬಂಧಗಳನ್ನು ಲೇಖನಗಳನ್ನು ಬರೆದರು. ಅವರ ಹಲವು ಸಂಶೋಧಕ ವರದಿಗಳು, ಪ್ರಬಂಧಗಳಿಗೆ ದೇಶ ವಿದೇಶದಲ್ಲೂ ಮನ್ನಣೆ ಗೌರವ ಸಿಕ್ಕಿದೆ.

ಅವಿಭಜಿತ ದಕ್ಷಿಣ ಕನ್ನಡದ ಇತಿಹಾಸದ ಬಗ್ಗೆ ಅವರು ಮಾಡಿದ ಸಂಶೋಧನೆ ಹಲವು ದಾಖಲೆಗಳ ಮಾಹಿತಿಯನ್ನು ಸಮಾಜಕ್ಕೆ ನೀಡಿತು. ಶಿಲಾ ಶಾಸನಗಳನ್ನು ಮಾದರಿಯಾಗಿಟ್ಟುಕೊಂಡು ಇವರು ಹಲವು ಲೇಖನ, ವರದಿ ಪ್ರಕಟಿಸಿದ್ದು ಅದಕ್ಕಾಗಿ ಪಿಎಚ್‌ಡಿ ಗೌರವವನ್ನು ಪಡೆದರು.

ಇತಿಹಾಸಕ್ಕೆ ಸಂಬಂಧಪಟ್ಟ ಹಲವು ಅಂತಾರಾಷ್ಟ್ರೀಯ ಸಮ್ಮೇಳನಗಳಲ್ಲಿ



ಸಮಾರಂಭದ ಉದ್ಘಾಟಕರು
ಇತಿಹಾಸ ತಜ್ಞ ಪ್ರೊ. ಬಿ.ಸುರೇಂದ್ರ ರಾವ್

ಭಾಗವಹಿಸುವ ವಸಂತ ಮಾಧವ ಅವರು ಗ್ರೇಟ್ ಬ್ರಿಟನ್ ರೊಯಲ್ ಎಸಿಯಾಟಿಕ್ ಸೊಸೈಟಿಯ ಫೆಲೊ ಆಗಿದ್ದಾರೆ. ಅಮೇರಿಕಾ ಸೇರಿದಂತೆ ಹಲವು ದೇಶಗಳ ಇತಿಹಾಸ ಸಮ್ಮೇಳನದಲ್ಲಿ ಆಹ್ವಾನಿಸಲ್ಪಟ್ಟ ದೇಶದ ಪ್ರಮುಖ ಇತಿಹಾಸ ಸಂಶೋಧಕರಲ್ಲಿ ಡಾ|ವಸಂತ ಮಾಧವ ಓರ್ವರಾಗಿದ್ದಾರೆ. ಟಿಪ್ಪು ಸುಲ್ತಾನ್, ಶ್ರೀ ಕೃಷ್ಣ ದೇವರಾಯ, ಅರಬರ ಕಾಲದ ಐತಿಹಾಸಿಕ ವಿಷಯಗಳ ಬಗ್ಗೆ ಕ್ಷ ಕಿರಣ ಬೀರಿದ ಇವರು ಆಯುರ್ವೇದ ವೈದ್ಯಕೀಯ ಚಿಕಿತ್ಸೆಯ ಏರುಪೇರಿನ ಬಗ್ಗೆಯೂ ಕರ್ನಾಟಕವನ್ನು ಮಾದರಿಯಾಗಿಸಿಕೊಂಡು ಸಂಶೋಧನೆ ನಡೆಸಿದ ಇತಿಹಾಸಕಾರ ಇವರು.

## "ಎಗ್ರಿಗೋಲ್ಡ್" ಕಥೆ ಏನು?

"ಎಗ್ರಿಗೋಲ್ಡ್ " ಎಂಬ ಆಂಧ್ರ ಪ್ರದೇಶದ ವಿಜಯವಾಡ ಮೂಲದ ಸಂಸ್ಥೆ ಕಳೆದ ಏಳು ವರ್ಷಗಳಿಂದ ಕುಂದಾಪುರ'ದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸಾವಿರಾರು ಏಜೆಂಟರುಗಳನ್ನು ಹೊಂದಿದೆ. ಹಲವು ಉತ್ಪನ್ನಗಳನ್ನು ತಯಾರಿಸಿ ಮಾರುಕಟ್ಟೆ ಮಾಡುವ ದಾಸ್ತಾನು ಸಹ ಹೊಂದಿದೆ. ಕುಂದಾಪುರ ಚರ್ಚ್‌ರಸ್ತೆಯ ಆರಂಭದಲ್ಲೇ ಇರುವ ಕಟ್ಟಡ ಸಂಕೀರ್ಣದಲ್ಲಿ ನೂರಾರು ಜನ ಪ್ರತಿನಿತ್ಯ ವ್ಯವಹಾರ ಮಾಡುತ್ತಿದ್ದರು. ಪ್ರತಿ ತಿಂಗಳು ಕೋಟ್ಯಾಂತರ ರೂಪಾಯಿ ವ್ಯವಹಾರ ನಡೆಯುತ್ತಿತ್ತು. ಆದರೆ ಒಂದು ತಿಂಗಳಿಂದ ಕಛೇರಿ ಬಂದ್ ಆಗಿ ಗ್ರಾಹಕರು ಕಂಗಾಲಾಗಿದ್ದಾರೆ.

ಕಂಪೆನಿಯಿಂದ ಗ್ರಾಹಕರಿಗೆ ಹಣ ಮರು ಪಾವತಿ ಆಗದೇ ಗ್ರಾಹಕರು ಪ್ರತಿದಿನ ಕಛೇರಿಗೆ ಬಂದು ಆಕ್ರೋಶ ವ್ಯಕ್ತ ಪಡಿಸುತ್ತಿರುವುದರಿಂದ ಕಛೇರಿ ಸಿಬ್ಬಂದಿಗಳು ಕಛೇರಿ ಯನ್ನು ಬಂದ್ ಮಾಡಿದ್ದಾರೆ! ಇದರಿಂದ ಏಜೆಂಟರು ಸಂಗ್ರಹಿಸಿದ ಹಣ ಕಟ್ಟಲಾಗದೇ ಸಮಸ್ಯೆ ಎದುರಿಸುತ್ತಿದ್ದರೆ, ಕಛೇರಿ ಬಂದ್ ಆಗಿರುವುದರಿಂದ ಹಣವೇ ಸಂಗ್ರಹ ವಾಗದೇ ನಿತ್ಯ ಜೀವನಕ್ಕೆ ಕಷ್ಟಪಡುವಂತಹ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಹಣ ಠೇವಣಿ ಇಟ್ಟವರು, ಆರ್.ಡಿ. ನಿತ್ಯ ಪಿಗ್ಮಿಗೆ ಹಣ ಕೊಟ್ಟವರು ಕೈ ಕೈ ಹಿಸುಕಿಕೊಳ್ಳುವ ಪರಿಸ್ಥಿತಿ ಬಂದಿದೆ.

ಕಳೆದ ಒಂದು ವರ್ಷದಿಂದ ಹಣ ಮರು ಪಾವತಿಯಲ್ಲಿ ಕಂಪೆನಿ ಬಹಳ ತಡ ಮಾಡುತ್ತಿದ್ದು, ಠೇವಣಿದಾರರ ಆಕ್ಷೇಪಕ್ಕೆ ತೆಲಂಗಾಣ ರಾಜ್ಯ ರಚನೆ ಕಾರಣ ಕೊಡುತ್ತಿದ್ದು, ಆದರೆ ಒಂದುವರೆ ವರ್ಷವಾದರೂ ಹಣಕಾಸು ವ್ಯವಸ್ಥೆ ಸರಿಪಡಿಸಿಕೊಳ್ಳಲಾಗದೇ 'ಎಗ್ರಿಗೋಲ್ಡ್' ನಂಬಿದವರು ಪರಿತಪಿಸಿಕೊಳ್ಳುತ್ತಿದ್ದಾರೆ.

(4 ನೇ ಪುಟಕ್ಕೆ)

AXIS BANK
Main Road, Near Abharana
Kundapura
Enjoy all modern Banking Facilities
at your Doorstep
For Free Personalized Service
Please Call
8095511181
08254-235601 /2 /3